# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

**ಸಮತೆಯೆಡೆಗೆ ನಮ್ಮ ನಡಿಗೆ**

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದೆ. 2012ನೇ ಇಸವಿಯಲ್ಲಿ ಮಂಗಳೂರಿನಲ್ಲಿ ಒಕ್ಕೂಟದ ರಚನೆಯಾಯಿತು. ಅಲ್ಲಿಂದ ಪ್ರತಿವರುಷ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುತ್ತ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಮಹಿಳಾ ಚಳುವಳಿ–ಸಾಹಿತ್ಯ–ಅಕ್ಯಾಡೆಮಿಕ್ ವಲಯ–ರಂಗಭೂಮಿಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆ–ಸಂಸ್ಥೆಗಳು ಒಕ್ಕೂಟದೊಂದಿಗಿದ್ದಾರೆ. ಜನಪರ ಜೀವಪರ ಚಿಂತನೆ ಇರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವ ಇರುವ ಎಲ್ಲರೂ  ಒಕ್ಕೂಟದ ಸಹಭಾಗಿಯಾಗಿದ್ದಾರೆ.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದಲ್ಲಿ ರಾಜ್ಯ–ಕೇಂದ್ರ ಸರ್ಕಾರಗಳ ಮೇಲ್ಮನೆ, ಕೆಳಮನೆ, ಸ್ಥಳೀಯ ಸಂಸ್ಥೆಗಳು, ಸಂಘಸಂಸ್ಥೆಗಳು – ಹೀಗೆ ಒಂದಲ್ಲಾ ಒಂದು ಕಡೆ ಚುನಾವಣೆ ಸದಾ ನಡೆಯುತ್ತಲೇ ಇರುತ್ತದೆ. ಬರಬರುತ್ತ ಪ್ರಜಾಪ್ರಭುತ್ವದ ಏಕೈಕ ದ್ಯೋತಕ ಮತ್ತು ಸಂಕೇತ ಚುನಾವಣೆಯೇನೋ ಎನ್ನುವ ವಾತಾವರಣ ಉದ್ಭವವಾಗಿದೆ. ಜನಮತ ಪ್ರಜಾತಂತ್ರದ ಜೀವಾಳ. ಆದರೆ ಚುನಾವಣೆಗಳಷ್ಟೇ ಪ್ರಜಾಪ್ರಭುತ್ವ ಉಳಿಸುವ ಪ್ರಕ್ರಿಯೆಗಳಲ್ಲ. ದಿನದಿಂದ ದಿನಕ್ಕೆ ಚುನಾವಣಾ ರಾಜಕೀಯ ಪ್ರಜಾಪ್ರಭುತ್ವ ಆಶಯಗಳಿಂದ ದೂರ ಸಾಗುತ್ತಿದೆ. ಸಂವಿಧಾನ ಕರ್ತೃಗಳ ಆಶಯದಂತೆ ನಮ್ಮ ಸಮಾಜ, ಸರ್ಕಾರಗಳು ನಡೆಯದೆ ಇರುವುದರಿಂದ ಸದನದಲ್ಲಿ ಹಾಗೂ ಮಂತ್ರಿಮಂಡಲದಲ್ಲಿ ಮಹಿಳಾ ಪ್ರಾತಿನಿಧ್ಯ ಕ್ಷೀಣವಾಗಿದೆ.

ಭಾರತದ ಸಂವಿಧಾನವು ಮಹಿಳೆಯರೂ ಸೇರಿದಂತೆ ತನ್ನೆಲ್ಲಾ ಜನತೆಗೆ ಸ್ವಾತಂತ್ರ್ಯ, ಸಮಾನತೆ ಹಾಗೂ ಬಂಧುತ್ವದ ನಾಗರಿಕ ಹಕ್ಕುಗಳನ್ನು ನೀಡಿದೆ. ಮಹಿಳೆಯರ ಸ್ಥಾನವು ಒಂದು ದೇಶದ ಅಭಿವೃದ್ಧಿಯ ಸಂಕೇತವಾಗಿದೆ. ಆದರೆ ಇವತ್ತಿನ ದಿನಗಳಲ್ಲಿ ಮಹಿಳೆಯರ ಸ್ಥಿತಿಗತಿ, ಮಹಿಳಾ ಪ್ರಾತಿನಿಧ್ಯ ಹೇಗಿದೆ? ಮಹಿಳೆಯರು ಚುನಾವಣಾ ರಾಜಕೀಯದಲ್ಲಿ ಭಾಗವಹಿಸಲು ಏಕೆ ಹಿಂಜರಿಯುತ್ತಿದ್ದಾರೆ? ಹಾಗಾದರೆ ಮಹಿಳಾ ಪ್ರಾತಿನಿಧ್ಯವನ್ನು ಸಾಧ್ಯವಾಗಿಸಲು ಇರುವ ದಾರಿಗಳಾವುವು?

ಇಂತಹ ಹತ್ತುಹಲವು ವಿಷಯಗಳನ್ನು ಚರ್ಚಿಸಲು ಒಕ್ಕೂಟವು ಕರ್ನಾಟಕದ 10 ಜಿಲ್ಲೆಗಳಲ್ಲಿ 'ಚುನಾವಣೆ: ಒಳ ಹೊರಗೆ' ಎಂಬ ಸರಣಿ ಕಾರ್ಯಕ್ರಮಗಳನ್ನು ನಡೆಸಿತು. ಪ್ರಜಾಪ್ರಭುತ್ವದ ಆತಂಕಗಳು–ಚುನಾವಣಾ ಸುಧಾರಣೆಗಳ ಕುರಿತು ಚಿಂತಕರಿಂದ ವಿಶ್ಲೇಷಣೆ, ಮಹಿಳಾ ಜನಪ್ರತಿನಿಧಿಗಳ ಅನುಭವ ಕಥನ ಹಂಚಿಕೊಳ್ಳುವಿಕೆ, ಸಂವಾದಗಳಿರುವ ಕಾರ್ಯಕ್ರಮಗಳು ಶಿವಮೊಗ್ಗ, ಕೊಪ್ಪಳ, ಧಾರವಾಡ, ಹೊಸಪೇಟೆ, ಮೈಸೂರು, ತುಮಕೂರು, ಮಂಗಳೂರು, ವಿಜಯಪುರ, ಬೆಂಗಳೂರು, ಬೆಳಗಾವಿಗಳಲ್ಲಿ ನಡೆದವು. ಇದುವರೆಗು ಸೂಕ್ತ ಮಹಿಳಾ ಪ್ರಾತಿನಿಧ್ಯ ಸಿಕ್ಕೇ ಇಲ್ಲ ಎನ್ನುವುದು ಎಲ್ಲೆಡೆಯೂ ಕೇಳಿಬಂದ ಮಾತು.

ಸ್ವಾತಂತ್ರ್ಯ ಚಳುವಳಿ, ಪರಿಸರ–ಸಮಾಜ ಸುಧಾರಣೆ–ಪ್ರಗತಿಪರ ಹೋರಾಟಗಳಲ್ಲಿ ನಾಡಿನ ಅಸಂಖ್ಯ ಹೆಣ್ಣುಮಕ್ಕಳು ಪಾಲ್ಗೊಳ್ಳುತ್ತಲೇ ಬಂದಿದ್ದಾರೆ. ತಮ್ಮ ನಿರಂತರ ದುಡಿಮೆ ಮತ್ತು ಸೇವೆಯ ಮೂಲಕ ಕುಟುಂಬ ಹಾಗೂ ದೇಶದ ಆರ್ಥಿಕತೆಗೆ ಕೊಡುಗೆ ನೀಡುತ್ತಲೇ ಬಂದಿದ್ದಾರೆ. ಇಂತಹ ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಲೇ ಇಲ್ಲ ಎಂಬುದಕ್ಕೆ ಸ್ವಾತಂತ್ರ್ಯೋತ್ತರ **ಕರ್ನಾಟಕ ವಿಧಾಸಭೆಯ 224 ಸದಸ್ಯರಲ್ಲಿ** ಪ್ರತಿಬಾರಿ ಆಯ್ಕೆಯಾದ ಮಹಿಳೆಯರ ಸಂಖ್ಯೆಯೇ ಸಾಕ್ಷಿ.

| | | |
|---|---|---|
| 1957 – 13 ಮಹಿಳೆಯರು | 1978 – 8 ಮಹಿಳೆಯರು | 1999 – 6 ಮಹಿಳೆಯರು |
| 1962 – 18 ಮಹಿಳೆಯರು/ | 1983 – 8 ಮಹಿಳೆಯರು | 2006 – 6 ಮಹಿಳೆಯರು |
| 1967 – 5 ಮಹಿಳೆಯರು | 1989 – 10 ಮಹಿಳೆಯರು | 2008 – 5 ಮಹಿಳೆಯರು |
| 1972 – 0 **– ಒಬ್ಬರೂ ಇಲ್ಲ** | 1989 – 7 ಮಹಿಳೆಯರು | 2013 – 6 ಮಹಿಳೆಯರು |

**545 ಸದಸ್ಯ ಬಲದ ಲೋಕಸಭೆಯಲ್ಲಿ ಮಹಿಳಾ ಪ್ರತಿನಿಧಿಗಳ ಅಂಕಿಸಂಖ್ಯೆ ಹೀಗಿದೆ:**

1952 – 24 ಮಹಿಳೆಯರು
1957 – 24 ಮಹಿಳೆಯರು
1962 – 37 ಮಹಿಳೆಯರು
1967 – 33 ಮಹಿಳೆಯರು
1971 – 28 ಮಹಿಳೆಯರು
1977 – 21 ಮಹಿಳೆಯರು
1980 – 32 ಮಹಿಳೆಯರು
1984 – 45 ಮಹಿಳೆಯರು
1989 – 28 ಮಹಿಳೆಯರು
1991 – 42 ಮಹಿಳೆಯರು
1996 – 41 ಮಹಿಳೆಯರು
1998 – 44 ಮಹಿಳೆಯರು
1999 – 52 ಮಹಿಳೆಯರು
2004 – 52 ಮಹಿಳೆಯರು
2009 – 69 ಮಹಿಳೆಯರು
2014 – 66 ಮಹಿಳೆಯರು

ಈಗ ಸ್ಪರ್ಧಿಸಿದವರಲ್ಲಿ 5% ಮಹಿಳೆಯರಷ್ಟೆ ಗೆಲ್ಲುತ್ತಿದ್ದಾರೆ. ನಾಲ್ಕು ದಶಕಗಳಿಂದ ಮಹಿಳಾ ಪ್ರಾತಿನಿಧ್ಯ ಶೇ. ಹತ್ತಕ್ಕಿಂತ ಹೆಚ್ಚಾಗಲು ಸಾಧ್ಯವಾಗಿಲ್ಲ. ಯಾಕೆ? ಪ್ರಾತಿನಿಧ್ಯ ಈ ನಾಡಿನ ಸೋದರಿಯರ ಹಕ್ಕಲ್ಲವೆ? ಪ್ರಾತಿನಿಧ್ಯಕ್ಕೆ ಅವರು ಯೋಗ್ಯರೂ, ಸಮರ್ಥರೂ ಅಲ್ಲವೆ? ಹೀಗೆಂದು ಒಕ್ಕೊರಲಿನಿಂದ ಕೇಳುವ ಕಾಲ ಬಂದಿದೆ.

ಎಂದೇ ಎಲ್ಲ ರಾಜಕೀಯ ಪಕ್ಷಗಳಿಗೂ ನಮ್ಮ ಹಕ್ಕೊತ್ತಾಯಗಳು ಕೆಳಗಿನಂತಿವೆ: ದೇಶದ ಹೆಣ್ಣುಮಕ್ಕಳನ್ನು ಸಹಜೀವಿಗಳೆಂದು, ಈ ದೇಶದ ಪ್ರಜೆಗಳೆಂದು ಭಾವಿಸಿದ್ದಲ್ಲಿ ನಮ್ಮ ಬೇಡಿಕೆಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳಿ.

- ಸಾಮಾಜಿಕ ನ್ಯಾಯಕ್ಕನುಗುಣವಾಗಿ ಎಲ್ಲ ಸ್ತರದ ಮಹಿಳೆಯರಿರುವಂತೆ ಮಹಿಳಾ ಮೀಸಲಾತಿ ಜಾರಿಯಾಗಬೇಕು ಹಾಗೂ ಮಹಿಳಾ ಮೀಸಲು ಕ್ಷೇತ್ರಗಳನ್ನು ಕಾಯ್ದಿರಿಸಬೇಕು. ಎಲ್ಲಾ ಸಾಂಸ್ಥಿಕ ರಚನೆಗಳಲ್ಲೂ ಕನಿಷ್ಠ 33% ಮಹಿಳಾ ಮೀಸಲಾತಿಯನ್ನು ಕಡ್ಡಾಯವಾಗಿ ಕೊಡಬೇಕು.
- ಮಹಿಳಾ ಮೀಸಲಾತಿ ಮಸೂದೆಯ ಅಂಗೀಕಾರಕ್ಕಾಗಿ ಕಾಯದೆ ಪ್ರತಿ ಪಕ್ಷವೂ ಮಹಿಳಾ ಮೀಸಲಾತಿ ಕಲ್ಪಿಸಬೇಕು. ಆಯ್ಕೆ ಸಮಿತಿ, ಕಾರ್ಯಕಾರಿ ಸಮಿತಿ, ಸಂಸದೀಯ ಸಮಿತಿ ಮೊದಲಾಗಿ ಪಕ್ಷದ ಪ್ರತಿ ಹಂತದಲ್ಲೂ; ಆಡಳಿತಾರೂಢ ಪಕ್ಷದ ಮಂತ್ರಿಮಂಡಲದಲ್ಲೂ; ನಿಗಮ–ಮಂಡಳಿಗಳಲ್ಲೂ ಮಹಿಳೆಯರಿಗೆ 33% ಮೀಸಲಾತಿ ಕಲ್ಪಿಸಬೇಕು.
- ಪ್ರತಿವರ್ಷವೂ ಸರ್ಕಾರ ಕಡ್ಡಾಯವಾಗಿ ಮಹಿಳಾ ಬಜೆಟ್ ಮಂಡಿಸಬೇಕು.
- ಎಲ್ಲಾ ಪಕ್ಷಗಳೂ ಪ್ರತ್ಯೇಕವಾಗಿ ಮಹಿಳಾ ಪ್ರಣಾಳಿಕೆ ಬಿಡುಗಡೆ ಮಾಡಬೇಕು. ಪಕ್ಷ, ಸಂಘಟನೆಯ ಒಳಗೆ ಕಡ್ಡಾಯವಾಗಿ ಲೈಂಗಿಕ ದೌರ್ಜನ್ಯ ದೂರು ನಿರ್ವಹಣಾ ಸಮಿತಿ ರಚಿಸಬೇಕು. ಹೆಣ್ಣುಮಕ್ಕಳು ಮುಕ್ತವಾಗಿ ಪಾಲ್ಗೊಳ್ಳುವಂತಹ ವಾತಾವರಣವನ್ನು ಪಕ್ಷ, ರಾಜಕಾರಣದ ಎಲ್ಲಾ ಹಂತಗಳಲ್ಲಿ ಕಲ್ಪಿಸಬೇಕು. ಮಹಿಳಾ ನಾಯಕತ್ವ ಕಟ್ಟುವುದನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಿ ಸೂಕ್ತಕ್ರಮ ಕೈಗೊಳ್ಳಬೇಕು.
- ಕುಟುಂಬ ರಾಜಕಾರಣ ನಿಲ್ಲಿಸಿ, ಸಮರ್ಥರಾದ ಸಾಮಾನ್ಯ ಕಾರ್ಯಕರ್ತೆಯರಿಗೂ ಟಿಕೆಟ್ ಕೊಡಬೇಕು.
- ಸಾರ್ವಜನಿಕ ಹಣವನ್ನು ದುರುಪಯೋಗ ಮಾಡುವವರಿಗೆ, ಹೆಣ್ಣುಮಕ್ಕಳನ್ನು ಹೀನಾಯವಾಗಿ ಕಾಣುವವರಿಗೆ, ಕಿರುಕುಳ ನೀಡುವವರಿಗೆ, ಅತ್ಯಾಚಾರಿಗಳಿಗೆ, ಲಿಂಗಭೇದ ಆಚರಿಸುವವರಿಗೆ ಟಿಕೇಟು ಕೊಡಲೇಬಾರದು.
- ಪ್ರಣಾಳಿಕೆಯಲ್ಲಿ ನೀಡಿರುವ ಭರವಸೆಗಳಿಗೆ ಬದ್ಧರಾಗಿ ಆ ಬಗ್ಗೆ ಕೈಗೊಂಡ ಕ್ರಮಗಳನ್ನು ಆರು ತಿಂಗಳಿಗೊಮ್ಮೆ ಸಾರ್ವಜನಿಕ ಸಭೆ ಕರೆದು ವರದಿ ಒಪ್ಪಿಸಬೇಕು.

**ಸಮಾನತೆ ನಮ್ಮ ಹಕ್ಕು, ಭಿಕ್ಷೆಯಲ್ಲ, ದಾನವಲ್ಲ. ಪ್ರಾತಿನಿಧ್ಯ ನಮ್ಮ ಹಕ್ಕು, ಭಿಕ್ಷೆಯಲ್ಲ, ದಾನವಲ್ಲ.**
**ಭಾರತೀಯ ನಾರಿಯರು, ಬೆಂಕಿಕಿಡಿಗಳಲ್ಲ, ಬೆಳಕಿನ ಕಿರಣಗಳು.**

ಶಾರದಾ ಗೋಪಾಲ, ಧಾರವಾಡ – 9902840033; ಅಖಿಲಾ ವಿದ್ಯಾಸಂದ್ರ, ಬೆಂಗಳೂರು – 9845250955; ಗೌರಿ, ಬೆಂಗಳೂರು – 8971232329; ಮಲ್ಲಮ್ಮ ಯಾಳವಾರ, ವಿಜಯಪುರ – 9448118204; ಸುಮನಾ, ಮೈಸೂರು – 9448177117; ಮರ್ಲಿನ್ ಮಾರ್ಟಿಸ್, ಮಂಗಳೂರು – 9448119827; ರೇಖಾಂಬಾ ಶಿವಮೊಗ್ಗ – 9480354479; ದಿಲೀಪ್ ಕಾಮತ್, ಬೆಳಗಾವಿ – 9448157588.